— ! ವಿಜಯ ಕರ್ನಾಟಕ ! —
— ! ನಿತ್ಯ ಬೆಳಗಾವಿ ! —
ಶುಕ್ರವಾರ, ನವೆಂಬರ್ 07, 2014
ಪುಟ ಸಂಖ್ಯೆ-01

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಗ್ರಂಥಾಲಯ
ಬೆಳಗಾವಿ

### ವಿಟಿಯು ಅಂತರ್ ಕಾಲೇಜು ಕ್ರೀಡಾಕೂಟ

# ಶಿವಕುಮಾರ, ಛಾಯಾ ಎಲ್. ದಾಖಲೆ ವೀರರು

**ವಿಕ ಸುದ್ದಿಲೋಕ**, ಬೆಳಗಾವಿ





ವಿಕ ಚಿತ್ರಲೋಕ

ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 17ನೇ ಅಂತರ್ ಕಾಲೇಜು ಕ್ರೀಡಾಕೂಟ2014–ಚಿಫಟಿ;15ರ ಅಥ್ಲೆಟಿಕ್ಸ್‌ನ ಪುರುಷರ ವಿಭಾಗದ 5ಸಾವಿರ ಮೀ. ಓಟದಲ್ಲಿ ಶಿವಮೊಗ್ಗದ ಕಲ್ಪತರು ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ದೀಪು ಟಿ. ಎಂ. 17.4 ಸೆಕೆಂಡುಗಳಲ್ಲಿ ಕ್ರಮಿಸುವ ಮೂಲಕ 2010– 11ರಲ್ಲಿ ಹುಬ್ಬಳ್ಳಿಯ ಬಿವಿಬಿಸಿಇಟಿಯ ಶಿವಕುಮಾರ ಅವರ ದಾಖಲೆ ಮುರಿದಿದ್ದಾರೆ.

ಮೂಡಬಿದಿರೆಯ ಆಳ್ವಾಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕುಮಾರ ಕೌಶಿಕ್ ಕೆ. ಎಸ್. ದ್ವಿತೀಯ ಹಾಗೂ ಬೆಂಗಳೂರಿನ ಬಿಎಂಎಸ್ ಕಾಲೇಜಿನ ಭರತ ಎನ್. ತೃತೀಯ ಸ್ಥಾನ ಪಡೆದಿದ್ದಾರೆ.

ಜಾವೆಲಿನ್ ಎಸೆತದ ಮಹಿಳಾ ವಿಭಾಗದಲ್ಲಿ ಬೆಂಗಳೂರಿನ ಆರ್‌ಎನ್ಎಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಛಾಯಾ ಎಲ್. 32.18ಮೀ. ಎಸೆತದೊಂದಿಗೆ ತುಮಕೂರಿನ ಎಸ್ಐಟಿಯ ಮೋನಿಶಾ ಅವರ 2000–ಚಿಫಟಿ;2001ರ ದಾಖಲೆ ಮುರಿದಿದ್ದಾರೆ. ಬೆಂಗಳೂರಿನ ಡಾನ್ ಬಾಸ್ಕೋ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸೋಮನಾ ಎಂ. ಗೌಡ ದ್ವಿತೀಯ ಹಾಗೂ ಇದೇ ಸಂಸ್ಥೆಯ ಮೇಘಾ ಎಸ್. ಜಿ. ತೃತೀಯ ಸ್ಥಾನ ಪಡೆದಿದ್ದಾರೆ.

ಪುರುಷರ ವಿಭಾಗದ 800 ಮೀ. ಓಟದಲ್ಲಿ ಮಂಗಳೂರಿನ ಶ್ರೀನಿವಾಸ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಮಿಜೊ ಚಾಕೊ ಪ್ರಥಮ, ಬೆಂಗಳೂರಿನ ಕೆ. ಎಸ್. ಸ್ಕೂಲ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್‌ನ ರಾಕೇಶ ಆರ್. ದ್ವಿತೀಯ ಸ್ಥಾನ ಹಾಗೂ ಮಂಗಳೂರಿನ ಸೇಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನ ಜೋಯಲ್ ಲೆಸ್ಲಿ ಡಿಸೋಜಾ ತೃತೀಯ ಸ್ಥಾನ ಪಡೆದಿದ್ದಾರೆ.

ಪುರುಷರ ಹೈಜಂಪ್ ವಿಭಾಗದಲ್ಲಿ ದಕ್ಷಿಣ ಕನ್ನಡದ ಕುರುಂಜಿಬಾಗ ಕೆವಿಜಿ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಶ್ರೀಕಾಂತ್ ಪ್ರಥಮ, ಮಂಗಳೂರಿನ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ನಿಶ್ಚಿನ್ ಪಾಲ್ ದ್ವಿತೀಯ ಹಾಗೂ ಮಂಗಳೂರಿನ ಎಸ್ಎಂಎಂ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಮಹಿರ್ ಖಲೀಲ್ ತೃತೀಯ ಸ್ಥಾನ ಪಡೆದಿದ್ದಾರೆ.

ಮಹಿಳಾ ವಿಭಾಗದ 400 ಮೀ. ಹರ್ಡಲ್ಸ್‌ನಲ್ಲಿ ಮೂಡಬಿದಿರೆಯ ಆಳ್ವಾಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕುಸುಮಾ ಪ್ರಥಮ, ಗುಬ್ಬಿಯ ಚನ್ನಬಸವೇಶ್ವರ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಚಂದ್ರಕಾಂತ ಟಿ. ಎಂ. ದ್ವಿತೀಯ ಹಾಗೂ ಮಂಗಳೂರಿನ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ವಿನುತಾ ಬಿ. ತೃತೀಯ ಸ್ಥಾನ ಪಡೆದಿದ್ದಾರೆ.

ಮಹಿಳೆಯರ 5000 ಮೀ. ಓಟದಲ್ಲಿ ಮಂಗಳೂರಿನ ಎಸ್ಎಂಎಂ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ರಕ್ಷಿತಾ ಕೆ. ಜಿ. ಪ್ರಥಮ, ಮೂಡಬಿದಿರೆಯ ಆಳ್ವಾಸ್ ಇನ್ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿಯ ಅನಿತಾ ಪಿ. ಕೆ. ದ್ವಿತೀಯ ಹಾಗೂ ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಅಲುಕುಮಾರಿ ತೃತೀಯ ಸ್ಥಾನ ಪಡೆದಿದ್ದಾರೆ.

ಮಹಿಳೆಯರ 800 ಮೀ. ಓಟದಲ್ಲಿ ಮಂಗಳೂರಿನ ಎಸ್ಎಂಎಂ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಶ್ರದ್ಧಾ ರಂಕ ದೇಸಾಯಿ ಪ್ರಥಮ, ಕೆಎಲ್ಎಸ್ ಗೋಗಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಮೃದುಲಾ ಹಲಗೇಕರ ದ್ವಿತೀಯ ಹಾಗೂ ಬೆಂಗಳೂರಿನ ದಯಾನಂದ ಸಾಗರ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಪಿ. ಎಸ್. ಪ್ರಣೀತಾ ತೃತೀಯ ಸ್ಥಾನ ಪಡೆದಿದ್ದಾರೆ. VK-VB-1

— ! ಪ್ರಜಾವಾಣಿ ! —
ಶುಕ್ರವಾರ, ನವೆಂಬರ್ 07, 2014
ಪುಟ ಸಂಖ್ಯೆ-02

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಗ್ರಂಥಾಲಯ
ಬೆಳಗಾವಿ

# ಅಧ್ಯಯನಕ್ಕೆ ಗಮನ ನೀಡಲು ಸಲಹೆ

**ಪ್ರಜಾವಾಣಿ ವಾರ್ತೆ** -2

ಬೆಳಗಾವಿ: 'ಕ್ರೀಡಾಪಟುಗಳು ದಿನ ನಿತ್ಯದ ಕ್ರೀಡಾ ಚಟುವಟಿಕೆಗಳ ಜೊತೆಗೆ ಅಧ್ಯಯನದ ಕಡೆಗೂ ಗಮನ ಕೊಡಬೇಕು' ಎಂದು ಉತ್ತರ ವಲಯದ ಪೊಲೀಸ್ ಮಹಾನಿರೀಕ್ಷಕ ಭಾಸ್ಕರ ರಾವ್ ಸಲಹೆ ನೀಡಿದರು.

ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಉತ್ತಮ ಸಾಧನೆ ಮಾಡಿದ ಕ್ರೀಡಾಪಟುಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

ಭವಿಷ್ಯದ ದೃಷ್ಟಿಯಿಂದ ಅಧ್ಯಯನದ ಕಡೆಗೂ ಗಮನ ಹರಿಸುವುದು ಅಗತ್ಯವಿದೆ ಎಂದ ಅವರು, ಅವಕಾಶಗಳು ಬಂದಾಗ ಸದುಪಯೋಗಪಡಿಸಿಕೊಂಡು ಜೀವನದಲ್ಲಿ ಮುಂದೆ ಬರಬೇಕು ಎಂದರು.

ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಭರತಲಾಲ್ ಮೀನಾ ಅವರು, ಕ್ರೀಡಾ ಸ್ಪರ್ಧೆಗಳು ವಿದ್ಯಾರ್ಥಿ ಜೀವನದ ಅವಿಭಾಜ್ಯ ಅಂಗ. ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಮಾನಸಿಕವಾಗಿ ಸದೃಢರಾಗಬಹುದು. ಯುವಕರು ಸೋಲು ಹಾಗೂ ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಬೇಕು ಎಂದು ಸಲಹೆ ನೀಡಿದರು.

ಬೆಂಗಳೂರು ವಿಶ್ವವಿದ್ಯಾಲಯದ ಸಂವಹನ ವಿಭಾಗದ ಪ್ರಾಧ್ಯಾಪಕ ಡಾ. ಬಿ.ಕೆ.ರವಿ ಮಾತನಾಡಿ, ತಾಂತ್ರಿಕ ಶಿಕ್ಷಣ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲೂ ವಿಟಿಯು ರಾಜ್ಯದಲ್ಲಿ ಮುಂಚೂಣಿಯಲ್ಲಿದೆ ಎಂದು ಶ್ಲಾಘಿಸಿದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಡಾ. ಎಚ್.ಮಹೇಶಪ್ಪ ಅವರು, ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳ ಜೀವನದಲ್ಲಿ ಶಿಸ್ತು, ದೃಢತೆ ಹಾಗೂ ಜವಾಬ್ದಾರಿ ಮುಂತಾದ ಗುಣಗಳನ್ನು ಬೆಳೆಸಲು ಸಹಕಾರಿಯಾಗುತ್ತವೆ ಎಂದು ಹೇಳಿದರು.

2013–14ರ ಸಾಲಿನಲ್ಲಿ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಸಾಧನೆಗೈದ 83 ಕ್ರೀಡಾಪಟುಗಳಿಗೆ ಒಟ್ಟು ₹5.51 ಲಕ್ಷ ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಕುಲಸಚಿವ ಡಾ. ಕೆ.ಇ.ಪ್ರಕಾಶ್, ಮೌಲ್ಯಮಾಪನ ಕುಲಸಚಿವ ಡಾ. ಎಚ್.ಜಿ.ಶೇಖರಪ್ಪ, ಡೀನ್ ಡಾ. ಡಿ.ಎಚ್.ರಾವ್ ಉಪಸ್ಥಿತರಿದ್ದರು.



ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಬೆಂಗಳೂರು ತಾಂತ್ರಿಕ ಸಂಸ್ಥೆಯ ಕ್ರೀಡಾಪಟು ಎಸ್.ಪ್ರತಾಪ್ ಅವರನ್ನು ಸನ್ಮಾನಿಸಲಾಯಿತು. ಭರತಲಾಲ್ ಮೀನಾ, ಡಾ. ಕೆ.ಇ.ಪ್ರಕಾಶ್, ಡಾ. ಎಚ್.ಮಹೇಶಪ್ಪ, ಭಾಸ್ಕರರಾವ್ ಡಾ. ಬಿ.ಕೆ.ರವಿ ಇದ್ದಾರೆ

— : Deccan Herald : —
Friday, November 07, 2014
Page No - 03

ಗ್ರಂಥಾಲಯ ಬೆಳಗಾವಿ

# VTU sports stars felicitated in City

**BELGAUM:** Visvesvaraya Technological University (VTU) felicitated VTU Sports Achievers for the year 2013-2014 on Wednesday at its headquarters 'Jnana Sangama' here.

Inspector General of Police (Northern Range) (IGP NR) Bhaskar Rao and Department of Higher Education Principal Secretary Bharat Lal Meena felicitated the sports achievers.

Speaking on the occasion, Mr Rao said that sports persons should simultaneously concentrate on their studies because nobody knows what would be their destiny. "One should take up opportunities and grow in their life", he said.

Mr Meena said that sports competitions are essential in student life to encourage spirit of participation. Participation in sports makes students mentally strong. Success and failure both are parts of sports as well as life, he added.



**IGP NR Bhaskar Rao and Department of Higher Education Principal Secretary Bharat Lal Meena presenting 'VTU Best Sports Person' award to Suhshaka Pratap of Bangalore Institute of Technology, Bangalore, in Belgaum. Vice-chancellor H Maheshappa and others look on.** DH PHOTO

Bangalore University Professor B K Ravi expressed happiness about the sports infrastructure developed by VTU.

He said that VTU has carved a niche, both in technical education and extra-curricular activities, which was unique achievement.

Vice-chancellor H Maheshappa, in his presidential remarks said that, sports inculcate discipline, dedication and responsibility among the students, which they can apply in other areas of life. This makes them achieve success in every sphere of life.

VTU awarded cash prizes and scholarships worth of ₹ 5,51,000 to 83 sportspersons for representing VTU at national and international sports events held at various places.

Registrar K E Prakash, Registrar (Evaluation) H G Shekharappa, Dean D H Rao, Executive Council and Academic Senate Members, principals of engineering colleges and sports achievers participated in the programme.

**DH News Service**

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಗ್ರಂಥಾಲಯ
ಬೆಳಗಾವಿ



# ವಿಟಿಯು ಕ್ರೀಡಾಕೂಟ: ಜಿಬಿನ್ ಕೂಟ ದಾಖಲೆ

ಬೆಳಗಾವಿ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 17 ನೇ ಅಂತರ್ ಕಾಲೇಜು ಅಥ್ಲೆಟಿಕ್ ಕೂಟದ ಎರಡನೇ ದಿನ ಗುರುವಾರ ಏಕಮಾತ್ರ ಕೂಟ ದಾಖಲೆ ನಿರ್ಮಾಣವಾಯಿತು. ಹಾಸನದ ರಾಜೀವ ತಾಂತ್ರಿಕ ಮಹಾವಿದ್ಯಾಲಯದ ಜಿಬಿನ್ ಮ್ಯಾಥ್ಯೂ ಈ ದಾಖಲೆಯ ಗೌರವದೊಂದಿಗೆ ಬಂಗಾರದ ಪದಕ ಕೊರಳಿಗೇರಿಸಿಕೊಂಡರು.

ಪುರುಷರ 20 ಕಿ.ಮೀ. ನಡಿಗೆ ಸ್ಪರ್ಧೆಯಲ್ಲಿ ಜಿಬಿನ್ ಮ್ಯಾಥ್ಯೂ 1 ತಾಸು 53 ನಿ. 45.67 ಸೆಕೆಂಡುಗಳಲ್ಲಿ ಕ್ರಮಿಸಿ 2007 ರಲ್ಲಿ ಬೆಳಗಾವಿಯ ಕೆಎಲ್‌ಇ ಇಂಜಿನಿಯರಿಂಗ್ ಕಾಲೇಜಿನ ರಚಿತ್ ಅನು (ಸಮಯ: 02:00.68 ಸೆ) ಅವರ ದಾಖಲೆಯನ್ನು ಅಳಿಸಿಹಾಕಿದರು.

ಜಿಬಿನ್ ಮ್ಯಾಥ್ಯೂಗೆ ಪ್ರತಿಸ್ಪರ್ಧಿಯೇ ಕಾಣಲಿಲ್ಲ. ಹೀಗಾಗಿ ಸ್ಪರ್ಧೆಯನ್ನು ನಿರಾಯಾಸವಾಗಿ ಪೂರ್ಣಗೊಳಿಸಿದರು. ಬೆಂಗಳೂರಿನ ರೇವಾ ಇಂಜಿನಿಯರಿಂಗ್ ಕಾಲೇಜಿನ ಸಚಿನ್ ಚೌಹಾಣ (ಸಮಯ: 2:10:34.23 ಸೆ) ಬೆಳ್ಳಿ ಪದಕ ಪಡೆದರೆ ಬೆಳಗಾವಿಯ ಅಂಗಡಿ ಇಂಜಿನಿಯರಿಂಗ್ ಕಾಲೇಜಿನ ಕಾಂತಿಲಾಲ ಚೌಧರಿ (ಸಮಯ: 2::13:22.70ಸೆ) ಕಂಚಿನ ಪದಕ ಗಳಿಸಿದರು.

**ಫಲಿತಾಂಶಗಳು:** ಪುರುಷರು: ಡಿಸ್ಕಸ್ ಥ್ರೋ: ಮನೋಜ ಕುಮಾರ (ಮಂಗಳೂರು ಸೇಂಟ್



**ಬೆಳಗಾವಿ: ವಿಅಥ್ಲೆಟಿಕ್ ಕೂಟದ ಮಹಿಳೆಯರ 800 ಮೀ. ಓಟದಲ್ಲಿ ಮೊದಲ ಮೂರು ಸ್ಥಾನಪಡೆದ ಸ್ಪರ್ಧಿಗಳಿಗೆ ಕುಲಸಚಿವ ಡಾ। ಕೆ.ಇ. ಪ್ರಕಾಶ ಪದಕ ವಿತರಿಸಿದರು.**

ಜೋಸೆಫ್ ತಾಂತ್ರಿಕ ಕಾಲೇಜ್, ದೂರ: 33.81 ಮೀ.) 2. ದೇವಿಪ್ರಸಾದ ಶೆಟ್ಟಿ ( ಮೂಡಬಿದರಿ ಆಳ್ವಾಸ್ ತಾಂತ್ರಿಕ ಕಾಲೇಜು, 32.44 ಮೀ), 3. ವಿಘ್ನೇಶ ಶೆಣೈ (ಮಂಗಳೂರು ಎನ್‌ಎಂಎಎಂ ತಾಂತ್ರಿಕ ಕಾಲೇಜು, 31.62 ಮೀ).

ಮಹಿಳೆಯರು: 100 ಮೀ. ಹರ್ಡಲ್ಸ್: 1. ಕೆ.ಯು. ಬಿಂಬಿತಾ (ಚಿಕ್ಕಮಗಳೂರು ಆದಿಚುಂಚನಗಿರಿ ತಾಂತ್ರಿಕ ಕಾಲೇಜು, ಸಮಯ: 18.88 ಸೆ), 2. ಎಲ್. ಸಿಂಧು ( ಆರ್‌ವಿ ಕಾಲೇಜು, ಬೆಂಗಳೂರು, 18.95 ಸೆ), 3. ಧನುಷಾ (ಸಹ್ಯಾದ್ರಿ ತಾಂತ್ರಿಕ ಕಾಲೇಜು, ಮಂಗಳೂರು, 19.74 ಸೆ).

1500 ಮೀ. ಶಾರದಾ ದೇಸಾಯಿ (ಎನ್ ಎಂಎಎಂ ತಾಂತ್ರಿಕ ಕಾಲೇಜು, ನಿಟ್ಟೆ ಮಂಗಳೂರು, 5;15.75 ಸೆ) 2. ಮೃದುಲಾ ಹಲಗೇಕರ (ಕೆಎಲ್ ಎಸ್ ಗೋಗಟೆ ತಾಂತ್ರಿಕ ಕಾಲೇಜು, ಬೆಳಗಾವಿ, 5:38.31 ಸೆ). 3. ದೀಕ್ಷಾ ವಿ. ಶೆಟ್ಟಿ (ಮಧ್ವ ವಾದಿರಾಜ ತಾಂತ್ರಿಕ ಕಾಲೇಜು, ಉಡುಪಿ, 5:57.34 ಸೆ)

5 ಕಿ ಮೀ. ನಡಿಗೆ: 1. ಜಯಶ್ರೀ (ಸಹ್ಯಾದ್ರಿ ತಾಂತ್ರಿಕ ಕಾಲೇಜು, ಮಂಗಳೂರು, ಸಮಯ: 36:27.66 ಸೆ) 2. ನಯನಾ (ಕಲ್ಪತರು ತಾಂತ್ರಿಕ ಕಾಲೇಜು, ತಿಪಟೂರು, 37:10.51 ಸೆ)3. ಬಿ.ಜೆ. ಲಕ್ಷ್ಮಿ (ರೇವಾ ತಾಂತ್ರಿಕ ಕಾಲೇಜು, ಬೆಂಗಳೂರು, 37:11.96 ಸೆ) ಉದ್ದಜಿಗಿತ: 1. ಮನಿಷಾ (ಎನ್ ಎಂ ಎ ಎಂ ತಾಂತ್ರಿಕ ಕಾಲೇಜು, ನಿಟ್ಟೆ ಮಂಗಳೂರು, ದೂರ: 5.04 ಮೀ) 2. ವಂದ್ಯಾ ವಿ. ಶೆಟ್ಟಿ (ಎನ್‌ಎಂಎಎಂ ತಾಂತ್ರಿಕ ಕಾಲೇಜು, ನಿಟ್ಟೆ ಮಂಗಳೂರು, 4.71 ಮೀ) 3. ಧನುಷಾ (ಸಹ್ಯಾದ್ರಿ ತಾಂತ್ರಿಕ ಕಾಲೇಜು, ಮಂಗಳೂರು, 4.51 ಮೀ.)

UV-13

ವಿಜಯವಾಣಿ
ಶುಕ್ರವಾರ, ನವೆಂಬರ್ 07, 2014
ಪುಟ ಸಂಖ್ಯೆ-03

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಗ್ರಂಥಾಲಯ
ಬೆಳಗಾವಿ

# ಕ್ರೀಡೆ ಜತೆ ಅಧ್ಯಯನಕ್ಕೂ ಆದ್ಯತೆ ನೀಡಿ

## ವಿಟಿಯುನಲ್ಲಿ ಕ್ರೀಡಾಪಟುಗಳಿಗೆ ಬಹುಮಾನ ವಿತರಿಸಿದ ಉತ್ತರ ವಲಯ ಐಜಿಪಿ ಭಾಸ್ಕರ ರಾವ್

ಬೆಳಗಾವಿ: ಭವಿಷ್ಯದ ಹಿತದೃಷ್ಟಿಯಿಂದ ಕ್ರೀಡಾಪಟುಗಳು ಕ್ರೀಡಾ ಚಟುವಟಿಕೆಗಳ ಜತೆಗೆ ಅಧ್ಯಯನಕ್ಕೂ ಆದ್ಯತೆ ನೀಡಬೇಕು. ಅವಕಾಶಗಳು ಬಂದಾಗ ಸದುಪಯೋಗ ಪಡಿಸಿಕೊಂಡು ಬದುಕು ರೂಪಿಸಿಕೊಳ್ಳಬೇಕು ಎಂದು ಉತ್ತರ ವಲಯ ಪೊಲೀಸ್ ಮಹಾ ನಿರೀಕ್ಷಕ ಭಾಸ್ಕರ ರಾವ್ ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಉತ್ತಮ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಬಹುಮಾನ ವಿತರಿಸಿ ಅವರು ಮಾತನಾಡಿದರು.

ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಭರತ ಲಾಲ್ ಮೀನಾ ಮಾತನಾಡಿ, ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳು ಮಾನಸಿಕವಾಗಿ ಸದೃಢರಾಗುತ್ತಾರೆ ಎಂದು ಹೇಳಿದರು.

ಬೆಂಗಳೂರು ವಿವಿ ಸಂವಹನ ವಿಭಾಗದ ಉಪನ್ಯಾಸಕ ಡಾ.ಬಿ.ಕೆ. ರವಿ ಮಾತನಾಡಿ, ತಾಂತ್ರಿಕ ಶಿಕ್ಷಣ ಹಾಗೂ ಪಠ್ಯೇತರ ಚಟುವಟಿಕೆಗಳೆರಡಲ್ಲೂ ವಿಟಿಯು ಮುಂಚೂಣಿಯಲ್ಲಿದೆ ಎಂದು ಹೇಳಿದರು.

ಕುಲಪತಿ ಡಾ.ಎಚ್. ಮಹೇಶಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳ ಜೀವನದಲ್ಲಿ ಶಿಸ್ತು, ದೃಢತೆ, ಜವಾಬ್ದಾರಿ ಮುಂತಾದ ಗುಣಗಳನ್ನು ಬೆಳೆಸಲು ಸಹಕಾರಿಯಾಗುತ್ತವೆ ಎಂದು ಹೇಳಿದರು. 203-14ರ ಸಾಲಿನಲ್ಲಿ ರಾಷ್ಟ್ರ ಹಾಗೂ



ಬೆಂಗಳೂರು ತಾಂತ್ರಿಕ ಕಾಲೇಜಿನ ಸುಹೃಲಾ ಪ್ರತಾಪ್ ಅವರಿಗೆ 'ಬೆಸ್ಟ್ ಸ್ಪೋರ್ಟ್ಸ್ ಪರ್ಸನ್' ಪ್ರಶಸ್ತಿ ನೀಡುತ್ತಿರುವ ಗಣ್ಯರು.

ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಸಾಧನೆಗೈದ 83 ಕ್ರೀಡಾಪಟುಗಳಿಗೆ 5. 51 ಲಕ್ಷ ರೂ. ನಗದು ಬಹುಮಾನ ವಿತರಿಸಲಾಯಿತು.

ವಿಟಿಯು ಕುಲಸಚಿವ ಡಾ.ಕೆ.ಇ. ಪ್ರಕಾಶ್, ಮೌಲ್ಯಮಾಪನ ಕುಲಸಚಿವ ಡಾ.ಎಚ್.ಜಿ. ಶೇಖರಪ್ಪ, ಡೀನ್ ಡಾ.ಡಿ.ಎಚ್. ರಾವ್, ಕಾರ್ಯಕಾರಿ ಮಂಡಳಿ ಸದಸ್ಯರು, ತಾಂತ್ರಿಕ ಮಹಾವಿದ್ಯಾಲಯಗಳ ಪ್ರಾಚಾರ್ಯರು ಹಾಗೂ ಕ್ರೀಡಾಪಟುಗಳು ಇದ್ದರು. VV-3

## ಕಾಲ್ನಡಿಗೆಯಲ್ಲಿ ಜೀಬಿನ ಮ್ಯಾಥ್ಯೂ ಸಾಧನೆ

ಬೆಳಗಾವಿ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ರಾಜ್ಯಮಟ್ಟದ 17ನೇ ಅಂತರ್ ಕಾಲೇಜು ಅಥ್ಲೆಟಿಕ್ ಕ್ರೀಡಾಕೂಟದ ಪುರುಷ ಮತ್ತು ಮಹಿಳಾ ವಿಭಾಗದ ಕಾಲ್ನಡಿಗೆ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಅಭೂತಪೂರ್ವ ಸಾಧನೆ ಮಾಡಿದ್ದಾರೆ.

ಪುರುಷ ವಿಭಾಗದ 20 ಕಿಮೀ ಕಾಲ್ನಡಿಗೆ ಸ್ಪರ್ಧೆಯಲ್ಲಿ ಹಾಸನ ಜಿಲ್ಲೆಯ ರಾಜೀವ ತಾಂತ್ರಿಕ ಕಾಲೇಜಿನ ವಿದ್ಯಾರ್ಥಿ ಜೀಬಿನ ಮ್ಯಾಥ್ಯೂ 1 ಗಂಟೆ 53 ನಿಮಿಷದ ಅವಧಿಯಲ್ಲಿ 20 ಕಿಮೀ ಕಾಲ್ನಡಿಗೆ ಮಾಡಿದ್ದಾರೆ. ಮಹಿಳಾ ವಿಭಾಗದ ಮಂಗಳೂರಿನ ಸಹ್ಯಾದ್ರಿ ತಾಂತ್ರಿಕ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನ ಜಯಶ್ರೀ, 36 ನಿಮಿಷ 27 ಸೆಕೆಂಡ್‌ನಲ್ಲಿ 5 ಕಿಮೀ ಕಾಲ್ನಡಿಗೆ ಮಾಡುವ ಮೂಲಕ ಸಾಧನೆ ಮಾಡಿದ್ದಾರೆ.

ಉದ್ದ ಜಿಗಿತ ವಿಭಾಗದಲ್ಲಿ ಮಂಗಳೂರಿನ ನಿಟ್ಟೆ ಎನ್‌ಎಂಎಎಂ ತಾಂತ್ರಿಕ ಕಾಲೇಜಿನ ಮನಿಶಾ, 5.04 ಮೀಟರ್ ಜಿಗಿಯುವ ಮೂಲಕ ಪ್ರಥಮ ಸ್ಥಾನ ಪಡೆದಿದ್ದರೆ, ಇದೇ ಕಾಲೇಜಿನ ವಂದ್ಯಾ 4.71 ಮೀಟರ್ ಜಿಗಿಯುವ ಮೂಲಕ ದ್ವಿತೀಯ ಮತ್ತು ಮಂಗಳೂರಿನ ಸಹ್ಯಾದ್ರಿ ತಾಂತ್ರಿಕ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನ ಧನುಷ್ 4.51 ಮೀಟರ್ ಜಿಗಿಯುವ ಮೂಲಕ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

1500 ಮೀಟರ್ ಓಟದ ವಿಭಾಗದಲ್ಲಿ 3 ಹಾಗೂ 100 ಹರ್ಡಲ್ಸ್ ಮೀಟರ್ ಓಟದ ವಿಭಾಗದಲ್ಲಿ 3 ಸೇರಿದಂತೆ ಒಟ್ಟು ಮಹಿಳಾ ವಿಭಾಗದಲ್ಲಿ 2ನೇ ದಿನ 12 ಪ್ರಶಸ್ತಿಗಳನ್ನು ಗೆದ್ದುಕೊಳ್ಳಲಾಗಿದೆ. ಪುರುಷರ ವಿಭಾಗದಲ್ಲಿ 20, ಕಾಲ್ನಡಿಗೆ ಸ್ಪರ್ಧೆ, ಚಕ್ರ ಎಸೆತ ವಿಭಾಗಗಳಲ್ಲಿ 6 ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ ಎಂದು ಕ್ರೀಡಾಕೂಟದ ಆಯೋಜಕರು ತಿಳಿಸಿದ್ದಾರೆ.

ಉದಯವಾಣಿ; ಶುಕ್ರವಾರ, ನವೆಂಬರ್ 07, 2014 ಪುಟ ಸಂಖ್ಯೆ-02

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಗ್ರಂಥಾಲಯ ಬೆಳಗಾವಿ

ಸಾಧಕರ ಸನ್ಮಾನ ■ ಪಠ್ಯೇತರ ಚಟುವಟಿಕೆಯ ವಿಟಿಯು ಮುಂಚೂಣಿಯಲ್ಲಿ

# ಕ್ರೀಡೆಯಿಂದ ಮಾನಸಿಕ ಸದೃಢತೆ: ಭರತಲಾಲ್ ಮೀನಾ



ಬೆಳಗಾವಿ: ವಿಟಿಯುದಲ್ಲಿ ಕ್ರೀಡಾ ಚಟುವಟಿಕೆಗಳಲ್ಲಿ ಉತ್ತಮ ಸಾಧನೆ ಮಾಡಿದ ಕ್ರೀಡಾಪಟುವಿಗೆ ಉತ್ತರ ವಲಯ ಐಜಿಪಿ ಭಾಸ್ಕರ್‌ರಾವ್ ಸನ್ಮಾನಿಸಿದರು. UV-2

ಬೆಳಗಾವಿ: ಕ್ರೀಡಾ ಸ್ಪರ್ಧೆಗಳು ವಿದ್ಯಾರ್ಥಿ ಜೀವನದ ಅವಿಭಾಜ್ಯ ಅಂಗ. ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳು ಮಾನಸಿಕವಾಗಿ ಸದೃಢರಾಗುತ್ತಾರೆ ಎಂದು ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಭರತಲಾಲ್ ಮೀನಾ ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಜ್ಞಾನ ಸಂಗಮ ಆವರಣದಲ್ಲಿ ಕ್ರೀಡಾ ಚಟುವಟಿಕೆಗಳಲ್ಲಿ ಉತ್ತಮಸಾಧನೆಮಾಡಿದಕ್ರೀಡಾಪಟುಗಳಿಗೆ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಉತ್ತರ ವಲಯ ಐಜಿಪಿ ಭಾಸ್ಕರ್‌ರಾವ್ ಮಾತನಾಡಿ, ಭವಿಷ್ಯದ ಹಿತದೃಷ್ಟಿಯಿಂದ ಕ್ರೀಡಾಪಟುಗಳು ತಮ್ಮ ದಿನನಿತ್ಯದ ಕ್ರೀಡಾ ಚಟುವಟಿಕೆಗಳ ಜೊತೆಗೆ ಅಧ್ಯಯನದತ್ತ ಗಮನ ಹರಿಸಬೇಕು, ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಜೀವನದಲ್ಲಿ ಮುಂದೆ ಬರಬೇಕು ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಸಂವಹನ ವಿಭಾಗದ ಪ್ರಾಧ್ಯಾಪಕ ಡಾ. ಬಿ. ಕೆ. ರವಿ ಮಾತನಾಡಿ, ತಾಂತ್ರಿಕ ಶಿಕ್ಷಣ ಹಾಗೂ ಪಠ್ಯೇತರ ಚಟುವಟಿಕೆಗಳೆರಡಲ್ಲೂ ವಿಟಿಯು ರಾಜ್ಯದಲ್ಲಿ ಮುಂಚೂಣಿಯಲ್ಲಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಡಾ. ಎಚ್. ಮಹೇಶಪ್ಪ ಮಾತನಾಡಿ, ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳ ಜೀವನದಲ್ಲಿ ಶಿಸ್ತು, ದೃಢತೆ ಹಾಗೂ ಜವಾಬ್ದಾರಿಯ ಗುಣಗಳನ್ನು ಬೆಳೆಸಲು ಸಹಕಾರಿಯಾಗುತ್ತವೆ ಎಂದು ಹೇಳಿದರು.

2013-14ರ ಸಾಲಿನಲ್ಲಿ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಸಾಧನೆಗೈದ 83 ಕ್ರೀಡಾಪಟುಗಳಿಗೆ 5,51,000 ರೂ. ನಗದು ಬಹುಮಾನ ವಿತರಿಸಲಾಯಿತು. ವಿಟಿಯು ಕುಲಸಚಿವ ಡಾ. ಕೆ. ಇ. ಪ್ರಕಾಶ್, ಮೌಲ್ಯಮಾಪನ ಕುಲಸಚಿವ ಡಾ. ಎಚ್. ಜಿ. ಶೇಖರಪ್ಪ, ಡೀನ್ ಡಾ. ಡಿ. ಹೆಚ್. ರಾವ್, ವಿಟಿಯು ಕಾರ್ಯಕಾರಿ ಮಂಡಳಿ ಮತ್ತು ವಿದ್ಯಾ ವಿದಾನ ಮಂಡಳಿ ಸದಸ್ಯರು, ತಾಂತ್ರಿಕ ಮಹಾವಿದ್ಯಾಲಯಗಳ ಪ್ರಾಚಾರ್ಯರು ಹಾಗೂ ವಿಜೇತ ಕ್ರೀಡಾಪಟುಗಳು ಭಾಗವಹಿಸಿದ್ದರು.